ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಹಿಂದೆಯೇ ಇದೇ ವಿಚಾರದಲ್ಲಿ ಒಂದು ಅಡ್ವರ್‌ನ್‌ಮೆಂಟ್ ಮೋಷನ್ ಕೂಡ ಕಳುಹಿಸಿದ್ದು ವಿಚಾರ ನನ್ನ ಜ್ಞಾಪಕದಲ್ಲಿದೆ. ಅವರು ಹೇಳುವಂತೆ ಆ ಜಡ್ಜ್‌ಮೆಂಟ್ ೫೦೦ ಪುಟಗಳಿಲ್ಲ. ನನ್ನ ಕೈಲಿರತಕ್ಕ ಜೆಡ್ಜ್‌ಮೆಂಟ್ ಟೈಪಾಗಿರತಕದ್ದು, ಇದು ೧೯೭ ಪುಟಗಳಲ್ಲಿದೆ. ಇದರಲ್ಲಿ ಆ ಜಡ್ಜಿಗಳು ಪೋಲೀಸಿನವರ ಕ್ರಮ ಸರಿಯಾಗಿಲ್ಲ ಎಂದು ಏನು ಹೇಳಿದ್ದಾರೆ ಅದರ ಬಗ್ಗೆ ಬೇಕಾದರೆ ಪುನರ್ ಪರಿಶೀಲನೆ ಮಾಡೋಣ. ಅವರೆನ್ನೂ ಕರೆಸಿ ವಿಚಾರ ಮಾಡುತ್ತೇನೆ. ಹಿಂದಿನ ಕಾಲದಲ್ಲಿ ಕೋರ್ಟಿನವರು ಅಕ್ರಮವಾಗಿ ನಡೆದುಕೊಂಡಿದ್ದವರ ಬಗ್ಗೆ ಸ್ಟ್ರಿಕ್ಚರ್ಸ್‌ನ್ನು ಪಾಸ್ ಮಾಡುತ್ತಿದ್ದರು. ಅದನ್ನು ಸರ್ಕಾರದವರು ಸೂಕ್ಷ್ಮವಾಗಿ ಪರಿಶೀಲನೆ ಮಾಡಬೇಕಾಗಿತ್ತು. ಆದರೆ ನಾನಾ ಕಾರಣಗಳಿಂದ ಆ ಪದ್ಧತಿ ಜಾರಿಯಲ್ಲಿಲ್ಲ. ಸ್ಟ್ರಿಕ್ಚರ್ಸ್ ಪಾಸ್ ಮಾಡಿದವರು ಅವರ ಪಾಡಿಗೆ ಅವರು ಸುಮ್ಮನಾಗಿ ಬಿಡುತ್ತಾರೆ ಅಧಿಕಾರಿಗಳೂ ಕೂಡ ಅವರ ಪಾಡಿಗೆ ಅವರು ಸುಮ್ಮನಾಗುತ್ತಾರೆ. ಸರ್ಕಾರವು ಹಾಗೆಯೇ ಸುಮ್ಮನಾಗುತ್ತಿದೆ. ಇದು ಸರಿಯಾದ್ದಲ್ಲ. ಕೋರ್ಟಿನವರು ಮಾಡತಕ್ಕ ಸ್ಟ್ರಿಕ್ಚರ್ಸ್ ಸರಿಯಾಗಿಲ್ಲದಿದ್ದರೆ ಮೇಲಕ್ಕೆ ಅಪೀಲ್ ಹೋಗಬೇಕು. ಅಥವಾ ಅದು ಸರಿಯಾಗಿದ್ದರೆ ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು. ಇದಕ್ಕೆ ಮುಂದೆ ಸರ್ಕಾರ ಬದ್ಧವಾಗಿ ನಡೆಯುತ್ತದೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ :—ಈ ಕೇಸಿಗೆ ಸಂಬಂಧಪಟ್ಟ ಪ್ರಮುಖ ವ್ಯಕ್ತಿಯಾದ ಸಬ್ ಇನ್‌ಸ್ಪೆಕ್ಟರ್ ಸತ್ಯನಾರಾಯಣಹಿಂಗ್‌ರವರನ್ನು ಬಿಟ್ಟು ಬಿಡಲಾಗಿದೆ. ಡೈರಿ ಬದಲಾಯಿಸಿ ಅವರು ತಮ್ಮ ಹೆಸರು ಕೇಸಿನಲ್ಲಿ ಸೇರದಂತೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ಜುಡಿಷಿಯಲ್ ಎನಕ್ವೈರಿಯಾಗಬೇಕು, ಹೀಗೆ ಅನೇಕ ಹೆಸರುಗಳು ಬಿಟ್ಟುಹೋಗಿ ನಿರಪರಾಧಿಗಳಿಗೆ ಶಿಕ್ಷೆಯಾಗಿದೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳುವಿರಾ?

SRI D. DEVARAJ URS : The Judge has stated in his judgement that there is a manipulation of records Beyond the judgement, it is not proper for the Government to go again into an enquiry on the same question. It may not be possible even legally. I will take action to give effect to this Judgement.

ಶ್ರೀ ಬಿ. ಪಿ. ಕಕ್ಕಿಲಾಯ : ಈ ಜಡ್ಜ್‌ಮೆಂಟ್‌ಗೊಳಪಟ್ಟು ಅಧಿಕಾರಿಗಳ ಮೇಲೆ ಕ್ರಮ ಕೈಕೊಳ್ಳಲು ಅವರನ್ನು ಸಸ್ಪೆಂಡ್ ಮಾಡುವಿರಾ? ನಿರಪರಾಧಿ ನೌಕರರಿಗೆ ಖರ್ಚು ಕೊಡುವ ವಿಚಾರ ಪುನರಾಲೋಚನೆ ಮಾಡುವಿರಾ?

ಶ್ರೀ ಡಿ. ದೇವರಾಜ ಅರಸ್ : ಬೇಡವೆಂದು ಕೋರ್ಟೇ ಹೇಳಿರುವಾಗ ನಾವು ಹೇಗೆ ಯೋಚನೆ ಮಾಡುವುದು? ಸಸ್ಪೆಂಡ್ ಮಾಡಬೇಕೇ ಅಥವಾ ಯಾವ ಕ್ರಮ ಕೈಕೊಳ್ಳಬೇಕು ಎಂಬುದನ್ನು ಆಲೋಚನೆ ಮಾಡಬೇಕಾಗಿದೆ.

SMT. WINNEFRED F FERNANDIS : In answer to (d) it is stated that the Judgement in the case and the evidence is being examined and suitable action will be taken in the matter May I know what action the Government is going to take in the matter?

SRI D. DEVARAJ URS : That is exactly what is being considered by the Government.

ADVANCES PAID TO CONTRACTORS BY D. F. O., KOLLEGAL

516 SRI R. RACHE GOWDA (Hanur).—

Will the Minister for Agriculture and Forests be pleased to state.—

(*a*) whether it is a fact that the District Forest Officer of Kollegal has paid advance amounts to contractors ;

SRI R. RACHE GOWDA.

(*b*) if so, the amount paid ;

(*c*) the number of contractors to whom the advances are paid ;

(*d*) whether there is any provision in the Law for advancing the amount as such ;

(*e*) whether it is not mentioned in the tender notification that no advance amount would be paid?

SRI K. H. PATIL (Minister for Agriculture and Forests)

(*a*) No advance has been paid to any contractors

(*b*) A sum of Rs. 18,35,000 was paid to the Contractors as part payment for their works executed by them, pending receipt of the final bill.

(*c*) 8 (Eight) contractors.

(*d*) There is no provision for payment of advance to the contractors under the rules in force bit.

(*e*) Yes.

ಶ್ರೀ ಆರ್. ರಾಚೇಗೌಡ.—ಬಿಲ್ಲಿನ ನೆಪದಲ್ಲಿ ಕಂಟ್ರಾಕ್ಟರುಗಳಿಗೆ ಕೆಲಸ ಪ್ರಾರಂಭಿಸುವುದಕ್ಕೆ ಮುಂಚಿ ಹಣ ಕೊಟ್ಟು ಸಂಭಂದಪಟ್ಟ ಅಧಿಕಾರಿ ತೇಕಡ ಮೂರರಂತೆ ವಸೂಲು ಮಾಡುತ್ತಿರುವುದು ಗಮನಕ್ಕೆ ಬಂದಿದೆಯೇ?

‡ ಶ್ರೀ ಕೆ. ಎಚ್. ಪಾಟೀಲ್.—ನಮ್ಮ ಗಮನಕ್ಕೆ ಬಂದಿಲ್ಲ. ಈಗ ಹೇಳಿದ್ದಾರೆ, ಎನ್‌ಕ್ವೈರಿ ಮಾಡುತ್ತೇವೆ.

ಶ್ರೀ ಆರ್. ರಾಚೇಗೌಡ.—ಆ ೧೮ ಮಂದಿ ಕಂಟ್ರಾಕ್ಟರುಗಳ ಹೆಸರನ್ನು ತಿಳಿಸಲು ಸಾಧ್ಯವೆ?

ಶ್ರೀ ಕೆ. ಎಚ್. ಪಾಟೀಲ.—ಆ ವಿವರ ನನ್ನಲ್ಲಿಲ್ಲ.

SRI M. SIDDAMADIAH.—In answer to (b) it is stated that a sum of Rs. 18,35,000 was paid to the contractors as part payment. I want to know whether the amount paid is less than the estimated amount?

SRI K. L. PATIL.—Certainly. I said it is a part payment for their works executed by them. It is less than the contracted amount.

MADAM SPEAKER.—Now the held over question No. 272 from 31st list May be takenup Sri Bapu Gowda may put his question.

SRI A. R. BADARINARAYANA IYENGAR.—As I was away, I am not aware of it. We will take it up tomorrow.

MADAM SPEAKER.—It is held over Now Question No 282